# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಆಂಗೀಕರಣ ಪರಿಷತ್ತು
## ಕೆ.ಎಸ್.ಇ.ಎ.ಬಿ 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.

ಸಂಖ್ಯೆ:K5/KSQAAC/ಹಳೆಕಾಗದ ವಿಲೇವಾರಿ/11/2023-24 ದಿನಾಂಕ:31-01-2024

**ದರಪಟ್ಟಿ ಆಹ್ವಾನ ಪತ್ರ**

**ವಿಷಯ:** ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ವಿಭಾಗದಲ್ಲಿನ ವಿವಿಧ ಪರೀಕ್ಷೆಗಳ ರದ್ದಿ ಕಾಗದಗಳ ವಿಲೇವಾರಿ ಕುರಿತು.

*****

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಾಯ ಮಂಡಲಿಯ ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ವಿಭಾಗದಲ್ಲಿ 2022-23ನೇ ಸಾಲಿನಲ್ಲಿ ನಡೆಸಿರುವ ವಿವಿಧ ಪರೀಕ್ಷೆಗಳ ಅನುಪಯುಕ್ತಗೊಂಡ ಉತ್ತರಿಸಿದ OMR ಮತ್ತು ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡಬೇಕಾಗಿದ್ದು, ಸದರಿ ರದ್ದಿ ಕಾಗದಗಳನ್ನು ತೆಗೆದುಕೊಂಡು ಹೋಗಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದ್ದು, ಸಂಸ್ಥೆಗಳು ಸದರಿ ಕಾರ್ಯಕ್ಕೆ ತಗಲುವ ಮೊತ್ತಕ್ಕೆ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ:08-02-2024 ರಂದು ಸಂಜೆ 5.00 ಗಂಟೆಯೊಳಗೆ, ಕಛೇರಿಗೆ ಸಲ್ಲಿಸುವುದು.

**ವಿವರ ಕೆಳಕಂಡಂತಿದೆ**

| Location | Material | Amount offered for sale (Rate per Kg) |
|---|---|---|
| KSQAAC, Ist Floor, Karnataka School Examination & Assessment Board 6th Cross, Malleshwaram,Bangaluru-560003. | USED OLD OMR, ANSWER BOOKLET, WASTE PAPER COVERS, WASTE CLOTH COVERS, | |

**ಷರತ್ತುಗಳು:**

1. KSQAAC ಕಛೇರಿ ವಿಭಾಗದ ಗೋದಾಮಿನಲ್ಲಿರುವ ಮೌಲ್ಯಮಾಪನಗೊಂಡ ಅನುಪಯುಕ್ತ OMR, ಉತ್ತರಪತ್ರಿಕೆಗಳು, ಪುಸ್ತಕಗಳು ಮತ್ತು ಇನ್ನಿತರ ಅನುಪಯುಕ್ತ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಲು ವ್ಯವಸ್ಥೆ ಮಾಡಿಕೊಳ್ಳುವುದು.
2. ನಿಯಮಾನುಸಾರ ಪ್ರತಿ ಕೆ.ಜಿಗೆ ಹೆಚ್ಚಿನ ದರ ನಮೂದಿಸಿದ ಸಂಸ್ಥೆಯ ದರಪಟ್ಟಿಯನ್ನು ಪರಿಗಣಿಸಲಾಗುವುದು.
3. ವಿಲೇವಾರಿ ಮಾಡುವ ಕಾಗದ ಪತ್ರಗಳ ದಾಸ್ತಾನನ್ನು ಕಛೇರಿ ವೇಳೆಯಲ್ಲಿ ಬಂದು ಪರಿಶೀಲಿಸಿಕೊಳ್ಳುವುದು.
4. ಈ ಕಛೇರಿಯಿಂದ ಬರುವ ಅಧಿಕಾರಿಗಳ ಸಮ್ಮುಖದಲ್ಲಿ ಮೊದಲು ಖಾಲಿ ವಾಹನವನ್ನು ವೇ ಬ್ರಿಡ್ಜ್‌ನಲ್ಲಿ ತೂಕ ಮಾಡಿಸಿ, ತದನಂತರ ಅನುಪಯುಕ್ತ ಉತ್ತರ ಪತ್ರಿಕೆಗಳು ಮತ್ತು ರದ್ದಿ ಕಾಗದವನ್ನು ತುಂಬಿರುವ ವಾಹನವನ್ನು ತೂಕ ಮಾಡಿಸಿ ತೆಗೆದುಕೊಂಡು ಹೋಗಲು ತಿಳಿಸಿದೆ.
5. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ಕಾರ್ಯನಿರ್ವಾಹಕ ನಿರ್ದೇಶಕರು (ಕೆ.ಎಸ್.ಕ್ಯು.ಎ.ಎ.ಸಿ, ಬೆಂಗಳೂರು) ರವರದ್ದಾಗಿರುತ್ತದೆ.
6. ನಿಯಮಾನುಸಾರ ಅಂತಿಮವಾಗಿ ಅರ್ಹವಾದ ಸಂಸ್ಥೆಯು, ಈ ಕಛೇರಿಯಿಂದ ಕಾರ್ಯಾದೇಶ ನೀಡಿದ ಒಂದು ವಾರದೊಳಗೆ ಸಾಮಾಗ್ರಿಗಳ ವಿಲೇವಾರಿ ಮಾಡುವುದು.
7. ಗೋದಾಮಿನಲ್ಲಿರುವ ಎಲ್ಲಾ ಹಳೆಯ ಕಾಗದಗಳಿಗೂ ಸೂಚಿತ ದರವೇ ಅನ್ವಯವಾಗುತ್ತದೆ.
8. ಅಧಿಕಾರಿಗಳ ಸಮ್ಮುಖದಲ್ಲಿ ವಿಲೇವಾರಿಯ ದಿನ ತೂಕಕ್ಕೆ ಅನುಗುಣವಾಗಿ ಸೂಚಿತ ದರವನ್ನು ಲೆಕ್ಕಚಾರ ಮಾಡಿ ವಿಲೇವಾರಿ ಮುನ್ನ ಮುಂಗಡವಾಗಿ ನೀಡಿರುವ ಮೊತ್ತ ರೂ.10,000/-ಗಳನ್ನು ಕಳೆದು ಉಳಿದ ಮೊತ್ತವನ್ನು ಒಂದೇ ಬಾರಿಗೆ ಬ್ಯಾಂಕ್ ಹುಂಡಿಯ ಮೂಲಕ ಪೂರ್ಣಪ್ರಮಾಣದಲ್ಲಿ ಪಾವತಿಸಿದ ನಂತರವಷ್ಟೇ ರದ್ದಿ ಕಾಗದವನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುವುದು.
9. ದರಪಟ್ಟಿ ಲಕೋಟೆಯ ಮೇಲೆ ಕಡ್ಡಾಯವಾಗಿ "ಮೌಲ್ಯಮಾಪನಗೊಂಡ OMR, ಉತ್ತರ ಪತ್ರಿಕೆಗಳು ಹಾಗೂ ರದ್ದಿ ಕಾಗದಗಳ ವಿಲೇವಾರಿ ದರಪಟ್ಟಿ" ಎಂದು ನಮೂದಿಸುವುದು.
10. ಹೆಚ್ಚಿನ ವಿವರಗಳು ಅವಶ್ಯವಿದ್ದಲ್ಲಿ ಕಛೇರಿಯನ್ನು ಅಥವಾ ದೂರವಾಣಿ ಸಂಖ್ಯೆ:080-29720300 ಮೂಲಕ ಸಂಪರ್ಕಿಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ, ಬೆಂಗಳೂರು

ಪ್ರತಿ,

1. ಪ್ರಕಟಣಾ ಫಲಕ/ಕೆ.ಎಸ್.ಇ.ಎ.ಬಿ ವೆಬ್‌ಸೈಟ್
2. ಕಛೇರಿ ಪ್ರತಿ.